**ಮೂ.ದಾ.ನಂ. 6/2026**

ಪಿ.ಡಬ್ಲ್ಯು.1

(ಇಂದು ದಿನಾಂಕ: **18-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ವಾದಿ ಪರ ಶ್ರೀ. N.M.H. ವಕೀಲರಿಂದ–**

ನಾನು ಈ ಪ್ರಕರಣದಲ್ಲಿ ವಾದಿ ಇದ್ದು, ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ.

1. ವಾದಿಯ ಜನನ ಪ್ರಮಾಣ ಪತ್ರವನ್ನು ನಿಪಿ1 ಎಂದು ಗುರುತಿಸಲಾಯಿತು.
2. ವಾದಿಯ ಆಧಾರ ಕಾರ್ಡ ನ ಧೃಡೀಕೃತ ಪ್ರತಿಯನ್ನು ನಿಪಿ2 ಎಂದು ಗುರುತಿಸಲಾಯಿತು.
3. ವಾದಿಯ ಪಾಸ್‌ಪೋರ್ಟನ ಧೃಡೀಕೃತ ಪ್ರತಿಯನ್ನು ನಿಪಿ3 ಎಂದು ಗುರುತಿಸಲಾಯಿತು.
4. ವಾದಿಯ ಪಾನ್ ಕಾರ್ಡನ ಧೃಡೀಕೃತ ಪ್ರತಿಯನ್ನು ನಿಪಿ4 ಎಂದು ಗುರುತಿಸಲಾಯಿತು.
5. ವಾದಿಯ ವರ್ಗಾವಣೆಯ ಪ್ರಮಾಣ ಪತ್ರದ ಧೃಡೀಕೃತ ಪ್ರತಿಯನ್ನು ನಿಪಿ5 ಎಂದು ಗುರುತಿಸಲಾಯಿತು.
6. ವಾದಿಯು ಪ್ರತಿವಾದಿಯರಿಗೆ ನೋಟೀಸು ನೀಡಿದ ಕುರಿತಾಗಿ ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ6 ಎಂದು ಗುರುತಿಸಲಾಯಿತು.
7. ಪ್ರತಿವಾದಿಯರು ನೋಟೀಸು ಸ್ವೀಕರಿಸಿದ ಕುರಿತಾಗಿ ಅಂಚೆ ಸ್ವೀಕವತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ7 ಎಂದು ಗುರುತಿಸಲಾಯಿತು.

**ಮೂ.ದಾ.ನಂ. 6/2026**

ಪಿ.ಡಬ್ಲ್ಯು.1

8. ಪ್ರತಿವಾದಿಯರಿಗೆ ನೋಟೀಸು ನೀಡಿದ ಕುರಿತಾಗಿ ನೋಟೀಸನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ8 ಎಂದು ಗುರುತಿಸಲಾಯಿತು.

(ನಿ.ಪಿ.1 ರಿಂದ 5 ರ ದೃಢೀಕೃತ ಪ್ರತಿಗಳನ್ನು ಮೂಲ ದಾಖಲಾತಿಯೊಂದಿಗೆ ತಾಳೆ ಮಾಡಿ ಪರಿಶೀಲಿಸಿದ ನಂತರದಲ್ಲಿ ಮೂಲ ದಾಖಲಾತಿಗಳನ್ನು ಫಿರ್ಯಾದುದಾರರಿಗೆ ಹಿಂದಿರುಗಿಸಲಾಯಿತು.)

**ಪಾಟೀ ಸವಾಲುಃ ಶ್ರೀ.ಪಿ.ಎಸ್.ಎಚ್. ವಕೀಲರಿಂದಃ**

ನಾನು ಶಾಲೆಗೆ ಸೇರುವಾಗ ನನ್ನ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಾನು ನನ್ನ ಜನನವು ಸರಕಾರಿ ಆಸ್ಪತ್ರೆ ಕುಮಟಾದಲ್ಲಿ ಆಗಿರುತ್ತದೆ. ಸರಕಾರಿ ಆಸ್ಪತ್ರೆ ಕುಮಟಾ ಇವರು ನೀಡಿದಂತೆ ನನ್ನ ಜನನ ಪ್ರಮಾಣ ಪತ್ರದಲ್ಲಿ ದಿನಾಂಕ ನೋಂದಣಿ ಆಗಿದೆ ಎಂದರೆ ಸರಿಯಲ್ಲ. ನನ್ನ ಸರಕಾರಿ ಆಸ್ಪತ್ರೆಯಲ್ಲಿ ನೀಡಿದ ಮಾಹಿತಿಯಂತೆ ಪ್ರತಿವಾದಿಗಳು ನನ್ನ ಜನನ ದಿನಾಂಕವನ್ನು ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ನನ್ನ ಜನನ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ನನ್ನ ಜನನ ಪ್ರಮಾಣ ಪತ್ರದಲ್ಲಿ ಜನನ ದಿನಾಂಕ ತಪ್ಪಾದ ಕುರಿತಾಗಿ ನನಗೆ ಇಲ್ಲೀಯವರೆಗೆ ಮಾಹಿತಿ ಇರುವುದಿಲ್ಲ. ನನ್ನ ಜನನ ಪ್ರಮಾಣ ಪತ್ರದಲ್ಲಿ ಜನನ ದಿನಾಂಕ ತಪ್ಪಾಗಿ ನಮೂದು ಆಗಿರುವುದರಲ್ಲಿ ಪ್ರತಿವಾದಿಯರ ತಪ್ಪು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಮೂ.ದಾ.ನಂ. 6/2026**

ಪಿ.ಡಬ್ಲ್ಯು.1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ